ಅದೇನೋ ಆ ಹುಡುಗಿ ಹೊಸ ಪ್ರಯೋಗಗಳಿಗೆ ತನ್ನ ಬದುಕನ್ನು ಒಡ್ಡಿಕೊಂಡಿದ್ದಾಳೆ. ಬೇಕಾದಷ್ಟು ಬಿದ್ದಿದೆ. ಅವಳಿಗೊಬ್ಬ ತಮ್ಮ ಇದ್ದಾನೆ. ಯುಎಸ್‌ನಲ್ಲಿ ಎಂಎಸ್ ಮಾಡುತ್ತಿದ್ದಾನೆ. ಅವನೋ ಇಂಡಿಯಾಗೆ ವಾಪಸ್ಸು ಬರುವುದಿಲ್ಲ ಎನ್ನುತ್ತಿದ್ದಾನೆ. ಅಲ್ಲೇ ಏನಾದರೂ ಬಿಸಿನೆಸ್ ಶುರು ಮಾಡ್ತಾನಂತೆ. ನಮ್ಮ ದೇಶ ಬಿಟ್ಟರೆ ಬೇರೆ ದೇಶದಲ್ಲಿ ನೆಮ್ಮದಿಯಿಂದ ಇರೋದಕ್ಕೆ ಸಾಧ್ಯವಾ ಹೇಳು. ಅದರಲ್ಲೂ ನಮ್ಮ ಮುಂಬಯಿ ಭೂಲೋಕದ ಸ್ವರ್ಗ' ಎಂದು ಅವರು ಮಾತು ನಿಲ್ಲಿಸಿದಾಗ ಬಿಸಿ ಬಿಸಿ ಜಾಮೂನು ಮತ್ತು ಬಾದಾಮ್ ಹಲ್ವಾ ಪ್ಲೇಟುಗಳು ಟೀಪಾಯನ್ನು ಅಲಂಕರಿಸಿದ್ದವು. ಆಸ್ಕರ್ ವೈಲ್ಡ್ ಬೇಡ ಎನ್ನದೆ ತಿಂದು ಮುಗಿಸಿ ಹೊರಟ. ಗೇಟಿನವರೆಗೂ ಬೀಳ್ಕೊಡಲು ಬಂದ ಸುಷ್ಮಾ ಅಗರ್ವಾಲ್ 'ಬೇಟಾ ಸೋನಾ, ಶನಿವಾರ ಹೇಗೂ ಪ್ರಿಯಾಂಕಾನ ಭೇಟಿಯಾಗುತ್ತಿರುವೆಯಲ್ಲಾ? ನನಗಂತೂ ನೀನು ಒಪ್ಪಿಗೆಯಾಗಿದ್ದೀಯ. ನೀವು ಕೂಡ ನಮ್ಮ ಬನಿಯಾ ಕಮ್ಯುನಿಟಿಯವರೇ. ಅವಳನ್ನು ಕನ್ವಿನ್ಸ್ ಮಾಡಲು ಪ್ರಯತ್ನಿಸು. ಇಷ್ಟೆಲ್ಲಾ ವರ್ಷಗಳ ಮೇಲೆ ನೀನವಳನ್ನು ಹುಡುಕಿಕೊಂಡು ಬಂದಿರುವೆಯೆಂದರೆ ನಿನ್ನ ಹೃದಯಾಂತರಾಳವನ್ನು ಒಬ್ಬ ತಾಯಿಯಾಗಿ ನಾನೂ ಅರ್ಥಮಾಡಿಕೊಂಡಿದ್ದೇನೆ. ಶುಭವಾಗಲಿ' ಎಂದು ಹಾರೈಸಿದ್ದರು. ಆಸ್ಕರ್ ವೈಲ್ಡನಿಗೆ ಹೃದಯ ತುಂಬಿಬಂದಿತ್ತು. ಅವನು ಲಗುಬಗೆಯಿಂದ ಕಾರು ಹತ್ತಿದ್ದ.

ಶನಿವಾರ ಬೆಳಿಗ್ಗೆ ಏಳೂವರೆಗೆ ಮನೆ ಬಿಟ್ಟ ಆಸ್ಕರ್ ವೈಲ್ಡ್ ಎಂಟೂ ಮುಕ್ಕಾಲು ಗಂಟೆಗೆ ದೊಂಬಿವಿಲಿಯಿಂದ ನಾಲ್ಕು ಕಿಲೋಮೀಟರ್ ದೂರವಿದ್ದ ಪ್ರಿಯಾಂಕಾ ಅಗರ್ವಾಲ್ ಕೊಟ್ಟಿದ್ದ ಅಡ್ರೆಸ್ ಮುಂದೆ ನಿಂತಿದ್ದ. ಎಂಟೆಕರೆ ತೆಂಗು, ಅಡಿಕೆ ಮತ್ತು ಸಪೋಟ ಮರಗಳಿಂದ ಅವರಿಸಿಕೊಂಡಿದ್ದ ತೋಟದಲ್ಲಿ ತಲೆ ಎತ್ತಿ ನಿಂತ ಭವ್ಯವಾದ ಬೃಹತ್ ಬಂಗಲೆ. ಗೇಟ್ ಮುಂದೆಯೇ 'ಪ್ರಿಯಾಂಕಾ ಟ್ರಾನ್ಸ್ ಇನ್‌ಸ್ಟಿಟ್ಯೂಟ್' ಎಂಬ ದೊಡ್ಡ ನೇಮ್ ಬೋರ್ಡನ್ನು ತೂಗುಹಾಕಲಾಗಿತ್ತು. ಸೀರೆಯನ್ನುಟ್ಟಿದ್ದ ಪ್ರಿಯಾಂಕಾ ಹೊರ ಬಂದು ಆಸ್ಕರ್ ವೈಲ್ಡನನ್ನು ಸ್ವಾಗತಿಸಿದ್ದಳು.

'ಇದು ಎಂಟು ಎಕರೆ ತೋಟ, ನಮ್ಮ **ancestral property**. ಇದನ್ನು ಸದುಪಯೋಗಪಡಿಸಿಕೊಳ್ಳಬೇಕೆಂದೇ ನಾನು ಇಲ್ಲಿ ಇನ್‌ಸ್ಟಿಟ್ಯೂಟ್ ತೆರೆದದ್ದು. ಅಪ್ಪ ಅಮ್ಮ ಬೇಡ ಎಂದರು. ಯಾರಾದರೂ ಡೆವಲಪರ್ಸ್‌ಗೆ ಕೊಡೋಣ ಎಂದರು. ರಿಯಲ್ ಎಸ್ಟೇಟ್ ಬಿಸಿನೆಸ್ ಒಳ್ಳೆ ಬೂಮ್‌ನಲ್ಲಿದೆ ಇಲ್ಲಿ ಈಗ. ಆದರೆ ಹಟ ಮಾಡಿದೆ ನಾನು. ಈ ಕಟ್ಟಡದಲ್ಲಿ ಎಂಬತ್ತು ಐಷಾರಾಮಿ ರೂಮುಗಳಿವೆ, ಆಲ್‌ಮೋಸ್ಟ್ ಸ್ಟಾರ್ ಹೋಟೆಲ್ ತರಾನೆ. ಇನ್ನೂರಿಪ್ಪತ್ತು ಸೀಟಿನ ಥಿಯೇಟರ್ ಇದೆ' ಅವಳು ಹೇಳುತ್ತಾ ಅವನನ್ನು ತನ್ನ ವಿಶಾಲವಾದ ಚೇಂಬರಿಗೆ ಕರೆದೊಯ್ದಳು. ಅದೊಂದು ಸುಸಜ್ಜಿತವಾದ ಮೀಟಿಂಗ್ ಹಾಲ್ ತರಹವೇ ಇದೆ.

'ಏನು, ಹೋಟೆಲ್ ಬಿಸಿನೆಸ್ಸಾ?' ಕೇಳಿದ್ದ ಆಸ್ಕರ್ ವೈಲ್ಡ್.

'ಅಲ್ಲಾ, ಮೊದಲು ತಿಂಡಿ ತಿನ್ನು, ಹೇಳ್ತೀನಿ' ಎಂದಿದ್ದಳು ಪ್ರಿಯಾಂಕಾ ನಗುತ್ತಾ. ಬಿಸಿ ಬಿಸಿ ಇಡ್ಲಿ, ಉಪ್ಪಿಟ್ಟು, ಪೂರಿ ಆಲೂಬಾಜಿ. ತಿಂಡಿ ತುಂಬಾನೇ ರುಚಿಕರವಾಗಿತ್ತು. ಚೇಂಬರ್‌ನಲ್ಲಿ ಇಬ್ಬರೇ ಉಳಿದಿದ್ದರು.

'ನೀನು ತುಂಬಾ ಬದಲಾಗಿದ್ದೀಯ. ಕ್ಲಾಸಿನಲ್ಲಿ ಬಹಳ ಮೌನದಿಂದ ಇರುತ್ತಿದ್ದವಳು ಇಷ್ಟೊಂದು ಬದಲಾವಣೆಗಳಿಗೆ ಹೇಗೆ ತೆರೆದುಕೊಂಡೆ ಎಂಬುದೇ ನನಗೆ ಅಚ್ಚರಿಯಾಗಿ ಕಾಣುತ್ತಿದೆ' ಅವನು ಮಾತು ಪ್ರಾರಂಭಿಸಿದ.

'ಹೌದು, ನನಗೆ ಲಿಟರೇಚರ್‌ನಲ್ಲಿ ಅಂಥ ಇಂಟರೆಸ್ಟ್ ಏನೂ ಇರಲಿಲ್ಲ. ಮನೆಯಲ್ಲಿರುವ ಬದಲು ಜಸ್ಟ್ ಒಂದು ಡಿಗ್ರಿ ಮಾಡಿಕೊಳ್ಳೋಣ ಅನ್ನಿಸ್ತು. ಹಾಗಾಗಿ ಬಿಎಗೆ ಸೇರಿದ್ದೆ. ಒಮ್ಮೆ ಬಂಧುವೊಬ್ಬರಿಗೆ ತೋರಿಸಲು ಅಮ್ಮನ ಜೊತೆ ನಮ್ಮ ದೂರದ ಸಂಬಂಧಿಕರೇ ಆದ ಡಾಕ್ಟರ್ ಪಂಕಜ್ ಅಶೋಕ್ ಅಗರವಾಲ್ ಹತ್ತಿರ ಹೋಗಿದ್ದೆ. ಆ ಕ್ಷಣವೇ ನ್ಯೂರೊ–ಸೈಕಾಲಜಿ ಓದಬೇಕೆಂಬ ದೃಢವಾದ ಸಂಕಲ್ಪ ಮೂಡಿತ್ತು. ಕೊನೆಗೂ ಬಿಎ ಡಿಗ್ರಿ ಡಿಸ್‌ಕಂಟಿನ್ಯೂ ಮಾಡಿ ಮೂರು ವರ್ಷಗಳ ಕಾಲ ನ್ಯೂರೊಸೈನ್ಸ್ ಮುಗಿಸಿದೆ. ಮುಂಬಯಿಯ ಇನ್ನೊಬ್ಬ ಖ್ಯಾತ ನ್ಯೂರಾಲಜಿಸ್ಟ್ ಡಾಕ್ಟರ್ ರಮೇಶ್ ಪಠಣಕರ್ ಬಳಿಯೂ ಕೆಲಸ ಮಾಡಿದೆ. ಕೋಕಿಲಾ ಬೆನ್ ಧೀರೂಬಾಯ್ ಅಂಬಾನಿ ನ್ಯೂರಾಲಜಿ ಆಸ್ಪತ್ರೆಗೂ ಒಂದಷ್ಟು ದಿನ ಅಲೆದಾಡಿದೆ. ಆದರೆ ನನಗೇಕೊ ತೃಪ್ತಿ ಸಿಗಲಿಲ್ಲ. ನ್ಯೂರೊಸೈನ್ಸ್‌ನಲ್ಲಿ ಹೊಸ ಪ್ರಯೋಗ ಏಕೆ ಮಾಡಬಾರದೆಂದು ಯೋಚನೆ ಬಂತು. ಯೋಗ, ಧ್ಯಾನಗಳೊಂದಿಗೆ ನ್ಯೂರೊಸೈಕಾಲಜಿಯನ್ನು ಏಕೆ ಬ್ಲೆಂಡ್ ಮಾಡಬಾರದೆಂಬ ಆಲೋಚನೆ ಹುಟ್ಟಿಕೊಃಡಿತು. ಅದರ ಫಲವೇ ಈ ಟ್ರಾನ್ಸ್ ಇನ್‌ಸ್ಟಿಟ್ಯೂಟ್. ಇದರಲ್ಲಿ ನನಗೆ ತುಂಬಾ ಅನುಕೂಲವಾಗಿದ್ದು ಅಮೆರಿಕದ ಜಾನ್ಸ್ ಹಾಪ್ಕಿನ್ಸ್ ನ್ಯೂರೊಸೈನ್ಸ್ ರೀಸರ್ಚ್‌ನಲ್ಲಿ ಕೆಲಸ ಮಾಡುತ್ತಿರುವ ಡಾಕ್ಟರ್ ಆಂಡ್ರ್ಯೂ ಜೋಸೆಫ್ ಎಂಬ ಸ್ಕಾಲರ್‌ನಿಂದಾಗಿ...' ಮಾತು ನಿಲ್ಲಿಸಿ ಅರ್ಧ ಗ್ಲಾಸ್ ನೀರು ಕುಡಿದಿದ್ದಳು ಪ್ರಿಯಾಂಕಾ. ಅವಳು ಮಾತು ನಿಲ್ಲಿಸುವುದನ್ನೇ ಕಾಯುತ್ತಿದ್ದವನಂತೆ ಆಸ್ಕರ್ ವೈಲ್ಡ್ 'ನಾನು ನಿನಗೆ ಪ್ರೊಪೋಸ್ ಮಾಡಲೆಂದು ಬಂದೆ. ನಿನ್ನನ್ನು ಹುಡುಕಿಕೊಂಡು ನಿಮ್ಮ ಮನೆಗೆ ಹೋದಾಗ ಸುಷ್ಮಾ ಆಂಟಿ ನನ್ನ ಮನಸ್ಸನ್ನು ಅರ್ಥ ಮಾಡಿಕೊಂಡಿದ್ದರು' ನೇರವಾಗಿ ಹೇಳಿದ್ದ ಆಸ್ಕರ್ ವೈಲ್ಡ್.

'ಓ ಮೈ ಗಾಡ್, ಏನು ಹೇಳ್ತ ಇದ್ದೀಯ ಆಸ್ಕರ್. ಯು ಆರ್ ಟೂ ಲೇಟ್ ಆಸ್ಕರ್. ನೀನು ಕ್ಲಾಸಿನಲ್ಲಿ ಓಲೈಸಿಕೊಂಡು ಬರಲೆಂದೇ ಕಾಯುತ್ತಿದ್ದೆ ನಾನು. ಮಾಸ್ತರುಗಳು ಲಿಟರೇಚರ್ ಪಾಠ ಮಾಡುತ್ತಿದ್ದಾಗ ನಿನ್ನನ್ನು ಕದ್ದು ಕದ್ದು ನೋಡ್ತಿದ್ದೆ. ಆದರೆ ನೀನು ಪಾಠ ಕೇಳುತ್ತಾ ಟ್ರಾನ್ಸ್‌ಗೆ ಹೋಗಿಬಿಡುತ್ತಿದ್ದೆ. ನಿನಗೆ ಬಿದ್ದ ಕನಸು, ಆ ಕನಸಿನಿಂದಾಗಿಯೇ ನೀನು ಹೆಸರನ್ನು ಬದಲಾಯಿಸಿಕೊಂಡಿದ್ದು ಮತ್ತು ಇಂಗ್ಲಿಷ್ ಲಿಟರೇಚರ್ ಓದಲು ಬಂದಿದ್ದು ಮುಂತಾದ ಎಲ್ಲಾ ವಿಚಾರಗಳು ನನಗೆ ತಿಳಿದಿತ್ತು. ನಿನ್ನ ಕನಸಿನ ನೃತ್ಯಗಾತಿಯನ್ನು ನನ್ನಲ್ಲಿ ನೀನು ಕಾಣಲು ಪ್ರಯತ್ನಿಸಬಹುದೆಂದು ತುಂಬಾ ನಿರೀಕ್ಷೆಯಿಂದ ಕಾದೆ. ಅದೇ ಕಾರಣಕ್ಕಾಗಿ ನಾನು ತರಗತಿಯಲ್ಲಿ ಯಾರನ್ನೂ ಮಾತನಾಡದೆ ಸೈಲೆಂಟಾಗಿರುತ್ತಿದ್ದೆ. ಈಗ ನನ್ನ ಮಾರ್ಗವೇ ಬೇರೆಯಾಗಿದೆಯಲ್ಲ ಆಸ್ಕರ್' ಎಂದು ಹೇಳಿದ ಅವಳ ಮುಖದಲ್ಲಿ ಮೂಡಿದ ನಗುವಿನಲ್ಲಿ ಅವನು ನವಿರಾಗಿ ಮುಳುಗಿದ್ದ.

'ನೀನು ನನಗೆ ಅರ್ಥವಾಗಲಿಲ್ಲವೋ, ಇಲ್ಲ ನಾನು ನಿನಗೆ ಅರ್ಥವಾಗಲಿಲ್ಲವೋ ನನಗೊಂದು ರೀತಿಯ ಗೊಂದಲ ಉಂಟಾಗಿದೆ' ತನಗೆ ತಾನೇ ಮಾತನಾಡಿಕೊಳ್ಳುತ್ತಿರುವಂತೆ ಹೇಳಿದ.

'ಎಸ್, ಪ್ರಸ್ತುತ ಪ್ರತಿಯೊಬ್ಬ ವ್ಯಕ್ತಿಯ ಸಮಸ್ಯೆಯೂ ಇದೇ ಆಗಿದೆ. ಇಂದು ಜಗತ್ತಿನ ಪ್ರತಿಯೊಬ್ಬ ವ್ಯಕ್ತಿಯ ಸಮಸ್ಯೆ ಬೇರೇನೂ ಅಲ್ಲ, ಸ್ವತಃ ಆ ವ್ಯಕ್ತಿಯೇ ಆಗಿದ್ದಾನೆ'.

'ನನಗೆ ಹಾಗೆ ಅನ್ನಿಸುತ್ತಿಲ್ಲ. ನಾನು ಸ್ವಲ್ಪ ದಿನಗಳ ಹಿಂದೆ ಕಾಮಾಟಿಪುರಕ್ಕೆ ಹೋಗಿದ್ದೆ. ಎಂಥಾ ಸಂಕಟದ ಸನ್ನಿವೇಶಗಳಲ್ಲೂ ಅವರ ಜೀವನ ಪ್ರೀತಿಯನ್ನು ನೋಡಬೇಕು' ಆಸ್ಕರ್ ವೈಲ್ಡ್ ತಕ್ಷಣ ಹೇಳಿದ್ದ.

'ಧಾರಾವಿ, ಕಾಮಾಟಿಪುರಗಳಲ್ಲಿ ನಾನೂ ಮೂರ್ನಾಲ್ಕು ಬಾರಿ ತಿರುಗಾಡಿದ್ದೇನೆ. ಅಲ್ಲಿ ತಿರುಗಾಡೋದು ಎಸ್ಪೆಷಲಿ ವಿದೇಶಿಯರಿಗೆ ಮತ್ತು ಶ್ರೀಮಂತರಿಗೆ ಫ್ಯಾಷನ್ ಆಗಿಬಿಟ್ಟಿದೆ. ನಾನು ಆಂಡ್ರ್ಯೂ ಜೋಸೆಫ್‌ನೊಂದಿಗೆ **passion** ಇಟ್ಟುಕೊಂಡು ಈ ಜಾಗಗಳಲ್ಲಿ ತಿರುಗಾಡಿದ್ದೇನೆ. ಎಲ್ಲಿ **Scarcity** ಇರುತ್ತೋ ಅಲ್ಲಿ ದೇಹ ಮತ್ತು ಮನಸ್ಸು ಎರಡೂ ಹಸಿವು ಮತ್ತು ಕಾಮಗಳನ್ನು ಈಡೇರಿಸಿಕೊಳ್ಳಲು ಹಪಹಪಿಸುತ್ತಿರುತ್ತವೆ. ಇನ್ ದಟ್ ವೇ ದೆ ಆರ್ ವೆರಿ ಕಂಫರ್ಟಬಲ್. ಆದರೆ ಸಮಸ್ಯೆ ಇರೋದು ಹೈ ಕ್ಲಾಸ್ ಜನರಲ್ಲಿ. ಅವರ ಸಮಸ್ಯೆಗಳನ್ನು ಅರಿತುಕೊಳ್ಳಲು ಮತ್ತು ಅಂಥ ಸಮಸ್ಯೆಗಳಿಗೆ ಪರಿಹಾರ ಹುಡುಕಿ ಅವರಲ್ಲೊಂದು ಸಮಸ್ಥಾಯಿ ಸ್ಥಿತಿಯನ್ನು ರೂಪಿಸಿ ದೇಹ ಮನಸ್ಸುಗಳ **equilibrium** ಕಾಪಾಡಿಕೊಳ್ಳುವಂತೆ ಪ್ರೇರೇಪಿಸುವುದು. ಟ್ರಾನ್ಸ್ ಎಂಬ ಪದಕ್ಕೆ ಇಂಥದ್ದೊಂದು ವ್ಯಾಖ್ಯಾನವನ್ನು ರೂಪಿಸುವ ಕಡೆ ನಮ್ಮ ಪ್ರಯೋಗಗಳು ಸಾಗಿವೆ' ಅವಳು ಭಾವಲೋಕಕ್ಕೆ ಇಳಿದು ಮಾತನಾಡುತ್ತಿದ್ದಳು.

ನಿಜವಾಗಿಯೂ ಅವಳ ಮಾತುಗಳು ವೈಲ್ಡನಿಗೆ ಸರಿಯಾಗಿ ಅರ್ಥವಾಗಿರಲಿಲ್ಲ. ಅವಳ ಕಣ್ಣಲ್ಲಿ ಕಣ್ಣಿಟ್ಟು 'ನನಗೆ ಸರಿಯಾಗಿ ಅರ್ಥವಾಗಲಿಲ್ಲ' ಎಂದು ಅನ್ಯಮನಸ್ಕನಾಗಿ ನುಡಿದಿದ್ದ.

'ಟ್ರಾನ್ಸ್ ಎಂದರೆ ಒಳಗಿನ ಮತ್ತು ಹೊರಗಿನ ಜಗತ್ತುಗಳೆರಡರೊಂದಿಗೂ ಸಮನ್ವಯತೆಯನ್ನು ಸಾಧಿಸುವುದು. ಅಂದರೆ ಪ್ರಜ್ಞೆ ಮತ್ತು ಸುಪ್ತಾವಸ್ಥೆ ಎರಡನ್ನೂ ಘಾತುಕತನವಿಲ್ಲದ ಒಂದು ಸಂಭ್ರಮಾವಸ್ಥೆಯಲ್ಲಿ ಒಗ್ಗೂಡಿಸುವ ಪರಿ ಅಥವಾ ಕ್ರಿಯೆ. ಹಿಂದೆ ಮನುಷ್ಯರು ತುಂಬಾ ಸರಳವಾದ ಜೀವನವನ್ನು ನಡೆಸುತ್ತಿದ್ದಾಗ ಹಸಿವನ್ನು ಈಡೇರಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ಅಗಾಧವಾದ ಲೈಂಗಿಕ ತೃಪ್ತಿಗೂ ಒಳಗಾಗುತ್ತಿದ್ದರು. ಮನುಷ್ಯನಿಗೆ